**ಕರ್ನಾಟಕ ಸರ್ಕಾರ**

**ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ**

**ಕೌಶಲ್ಯ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029**

**ದೂರವಾಣಿ ಸಂಖ್ಯೆ : 080 – 25189105 e-mail ID : citeadmission@gmail.com**

**ಕೌಶಲ್ಯ ಸಹಾಯವಾಣಿ: 155267**

---

ಸಂ.ಕೈತಉಇ/ತರಬೇತಿ/ತ-1/ವಿವ-03/2024-25 ದಿನಾಂಕ: 16-05-2024

**ಅಧಿಸೂಚನೆ**

**ವಿಷಯ:- ರಾಜ್ಯದ ಸರ್ಕಾರಿ & ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಆಗಸ್ಟ್-2024 ನೇ ಶೈಕ್ಷಣಿಕ ಸಾಲಿನ ಅನ್ ಲೈನ್ ಪ್ರವೇಶಗಳ ಕುರಿತು.**

**ಉಲ್ಲೇಖ:-1.** DGT, New Delhi, Ltr No. DGT-Aff011/1/2023-O/o DIR (TC) – Part-2 (63756) Dtd: 03-05-2024.

2. ಸರ್ಕಾರಿಅದೇಶಸಂ.ಕೌಉಜೀಇ 02 ಕೈತಇ 2019, ಬೆಂಗಳೂರು, ದಿ.15/06/2019.

**<<>>**

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ರಾಜ್ಯದ 270 ಸರ್ಕಾರಿ ಹಾಗೂ 192ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಆಗಸ್ಟ್-2024 ನೇ ಸಾಲಿಗೆ ಮೆರಿಟ್-ಕಂ-ರಿಸರ್ವೇಷನ್ ಆಧಾರಿತ ಪ್ರವೇಶಗಳನ್ನು ಆನ್ ಲೈನ್ ಮುಖಾಂತರ ಮಾಡಲಾಗುತ್ತಿದೆ. ಪ್ರವೇಶ ಪಡೆಯಲು ದಿ: 01-08-2024ರಂದು 14 ವರ್ಷ ಮೇಲ್ಪಟ್ಟ ವಯೋಮಿತಿಯು ಕಡ್ಡಾಯವಾಗಿರುತ್ತದೆ. ವೃತ್ತಿಯ ಅನುಸಾರವಾಗಿ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣ / ಅನುತ್ತೀರ್ಣರಾದ / 8ನೇ ತರಗತಿ ಉತ್ತೀರ್ಣರಾದ ಅರ್ಹ ಆಸಕ್ತ ಅಭ್ಯರ್ಥಿಗಳು ಸರ್ಕಾರಿ ಮತ್ತು ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಎನ್.ಸಿ.ವಿ.ಟಿ ಸಂಯೋಜಿತ ಸಿಟಿಎಸ್ ಯೋಜನೆಯಡಿಯಲ್ಲಿರುವ ಇಂಜಿನಿಯರಿಂಗ್ ಹಾಗೂ ನಾನ್-ಇಂಜಿನಿಯರಿಂಗ್ ವೃತ್ತಿಗಳಿಗೆ ರಾಜ್ಯದ ಯಾವುದೇ ಭಾಗದಿಂದ ಇಲಾಖೆಯ ವೆಬ್ ಸೈಟ್ **www.cite.karnataka.gov.in** ಮೂಲಕ ಸ್ವತಃ ಅಥವಾ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿರುವ **Help Desk** ಮುಖಾಂತರ ಆನ್ ಲೈನ್ ಅರ್ಜಿಗಳನ್ನು ದಿನಾಂಕ:**-20-05-2024** ರಿಂದ ದಿನಾಂಕ: **03-06-2024** ವರೆಗೆ ಸಲ್ಲಿಸಬಹುದಾಗಿರುತ್ತದೆ. ಐಟಿಐ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಬರುವ ಎಲ್ಲಾ ಅಭ್ಯರ್ಥಿಗಳಿಗೆ ಪ್ರತಿ ಸಂಸ್ಥೆಯಲ್ಲಿ ಒಂದು **Help Desk** ಪ್ರಾರಂಭಿಸಿ, ಅಭ್ಯರ್ಥಿಗಳಿಗೆ ಅಗತ್ಯವಾದ ಎಲ್ಲಾ ಮಾಹಿತಿ ನೀಡಿ, ಅವರು **Online** ನಲ್ಲಿ ಅರ್ಜಿಯನ್ನು ಸಲ್ಲಿಸಿಲ್ಲದಿದ್ದಲ್ಲಿ, ಐಟಿಐನಲ್ಲೇ ಅರ್ಜಿಯನ್ನು **Online** ನಲ್ಲಿ ನೋಂದಾಯಿಸಿಕೊಳ್ಳುವುದು.

**DGT, New Delhi** ಇವರಿಂದ ಸಂಯೋಜನೆ ಪಡೆದ **(N.C.V.T.)** ಘಟಕಗಳಿಗೆ ಮಾತ್ರ ಪ್ರವೇಶ ನಡೆಸಲಾಗುವುದು.ಹಾಗೂ ಪ್ರತಿಯೊಂದು ವೃತ್ತಿಯಲ್ಲಿನ ನಿಗಧಿತ ಸ್ಥಾನಗಳಿಗಿಂತ ಹೆಚ್ಚುವರಿಯಾಗಿ ಪ್ರವೇಶ ನೀಡಲಾಗುವುದಿಲ್ಲ.

ಸೂಚನೆಗಳು:

1. ಭಾರತದ ಪ್ರಜೆಯಾಗಿ ಅಭ್ಯರ್ಥಿಯು ರಾಜ್ಯದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ **01** ರಿಂದ **10**ನೇ ತರಗತಿಯವರೆಗೆ ರಾಜ್ಯದಲ್ಲಿ ಕನಿಷ್ಠ **05** ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು. **(**ಈ ಬಗ್ಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಯವರು/ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯವರಿಂದ ದೃಢೀಕೃತ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದಿರಬೇಕು.**)** ಈ ಸಂಬಂಧ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸರ್ಕಾರದ/ಭಾರತೀಯ ಸೇನೆ/ಕೇಂದ್ರ ಸರ್ಕಾರದ ಅಂಗಸಂಸ್ಥೆಗಳು/ಬೇರೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರು ಮತ್ತು ನಿವೃತ ನೌಕರರ ಮಕ್ಕಳನ್ನು ಹೊರತುಪಡಿಸಿದೆ.
2. ಅರ್ಹತೆ- ಎ) Carpenter, ಬಿ) Sheet Metal Worker ಸಿ.) Welder, ಡಿ) Surface Ornamentation Technique, ಇ) Wireman ಎಫ್) Dress Making ಜಿ) Sewing Technology ಹೆಚ್) Mason, ಐ) Painter, ಜೆ) Plumber ವೃತ್ತಿಗಳಿಗೆ **8**ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ **10**ನೇ ತರಗತಿಯ ಅನುತ್ತೀರ್ಣ ಅಂಕಪಟ್ಟಿಯು ಕಡ್ಡಾಯವಾಗಿರುತ್ತದೆ. ಇತರೆ ವೃತ್ತಿಗಳಿಗೆ DGT ಯು ನಿಗಧಿಪಡಿಸಿರುವಂತೆ SSLC/KOS/CBSE/ICSE/NIOS ಹಾಗೂ COBSE ರವರಿಂದ ಮಾನ್ಯತೆ ಪಡೆದ ಪರೀಕ್ಷಾ ಮಂಡಳಿಗಳಲ್ಲಿ **10**ನೇ ತರಗತಿ ಉತ್ತೀರ್ಣರಾಗಿರಬೇಕು.
3. ಅರ್ಜಿ ಸಲ್ಲಿಸುವ ಎಲ್ಲಾ ಅಭ್ಯರ್ಥಿಗಳು **DGT, New Delhi** ನಿಯಮಾನುಸಾರ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀಡುವ Mobile Number & e-Mail IDಯನ್ನು ಕಡ್ಡಾಯವಾಗಿ ತಮ್ಮ ತರಬೇತಿ ಅವಧಿ ಮತ್ತು ಪರೀಕ್ಷೆ ಮುಕ್ತಾಯದವರೆಗೆ ಹೊಂದಿರತಕ್ಕದ್ದು ಮತ್ತು ಬದಲಾವಣೆಗೆ ಯಾವುದೇ ಅವಕಾಶ ಇರುವುದಿಲ್ಲ.
4. ರಾಜ್ಯದ ಸರ್ಕಾರಿ & ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸರ್ಕಾರದಿಂದ ನಿಗದಿಪಡಿಸಿರುವ ವಾರ್ಷಿಕ ಬೋಧನಾ ಶುಲ್ಕಗಳ ವಿವರ

| | | |
|---|---|---|
| **01** | ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು | T1200/- |
| **02** | ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು | T2400/- |

5. ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಎನ್.ಸಿ.ವಿ.ಟಿ ಸಂಯೋಜಿತ ಪ್ರತಿ ಅನುದಾನಿತ ವೃತ್ತಿಯಲ್ಲಿನ ಒಟ್ಟು ಸ್ಥಾನಗಳಲ್ಲಿ **04**(ನಾಲ್ಕು) ಸ್ಥಾನಗಳಿಗೆ ಉಲ್ಲೇಖ **2** ರಂತೆ ಹಾಗೂ ನಿಯಾಮಾನುಸಾರ ಆಡಳಿತ ಮಂಡಳಿಯವರು ಪ್ರವೇಶ ಮಾಡಿಕೊಳ್ಳಲು ಕ್ರಮ ಕೈಗೊಳ್ಳುವುದು.

6. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಇತರೆ ಪ್ರವರ್ಗಗಳಿಗೆ ಮೀಸಲಾತಿ ನಿಯಮಗಳಂತೆ ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.
7. ಸರ್ಕಾರದ ನಿಯಮದಂತೆ, ಅನುಚ್ಛೇದ 371-ಜೆ ಯಡಿಯಲ್ಲಿ ಹೈದ್ರಾಬಾದ್ ಕರ್ನಾಟಕ ಮೀಸಲಾತಿಯನ್ವಯ ಸ್ಥಾನಗಳನ್ನು ಮೀಸಲಿಡಲಾಗಿದೆ. ಅನುಚ್ಛೇದ 371-ಜೆ ಯಡಿಯಲ್ಲಿ ಹೈದ್ರಾಬಾದ್ ಕರ್ನಾಟಕ ಮೀಸಲಾತಿಗೆ ಸೇರಿದಂತೆ ಅಗತ್ಯ ಪ್ರಮಾಣ ಪತ್ರಗಳನ್ನು ಸರ್ಕಾರಿಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಹಾಜರು ಪಡಿಸತಕ್ಕದ್ದು. ಹಾಜರು ಪಡಿಸದೇ ಇದ್ದಲ್ಲಿ ಅರ್ಜಿಯಲ್ಲಿ ಕೋರಿರುವ ಮೀಸಲಾತಿಯನ್ನು ಪರಿಗಣಿಸಲಾಗುವುದಿಲ್ಲ.
8. 248 ಸರ್ಕಾರಿ & ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಶೇ.33.3 ರಷ್ಟು ಸ್ಥಾನಗಳನ್ನು ಸಮತಳವಾಗಿ ಮಹಿಳೆಯರಿಗೆ ಮೀಸಲಿಡಲಾಗಿದೆ. 22 ಸರ್ಕಾರಿ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಶೇ 100 ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ.
9. ಶೇಕಡ 5 ರಷ್ಟು ಸ್ಥಾನಗಳನ್ನು ಅಂಗವಿಕಲರಿಗಾಗಿ ಹಾಗೂ ಶೇಕಡ 2 ರಷ್ಟು ಸ್ಥಾನಗಳನ್ನು ಸಮತಳವಾಗಿ ಮಾಜಿ-ಯೋಧರು ಹಾಗೂ ಮಾಜಿ-ಯೋಧರ ಮಕ್ಕಳಿಗಾಗಿ ಮೀಸಲಿಡಲಾಗಿದೆ.
10. ರಾಜ್ಯ ಸರ್ಕಾರದ ನಿಯಮಗಳ ಅನುಸಾರ ಮೀಸಲಾತಿಯನ್ನು ಕಲ್ಪಿಸಲಾಗುವುದು.
11. ಒಂದರಿಂದ ಹತ್ತನೇ ತರಗತಿಯವರೆಗೆ ಗ್ರಾಮಿಣ ಪ್ರದೇಶಗಳಲ್ಲಿ ಹತ್ತು ವರ್ಷ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಶೇಕಡ 10 ರಷ್ಟು ಅಂಕಗಳನ್ನು ಕೃಪಾಂಕವಾಗಿ ನೀಡಲಾಗುವುದು.
12. ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಶೇ 05 ರಷ್ಟು ಸ್ಥಾನಗಳನ್ನು ಸಮತಳ ಮೀಸಲಾತಿಯಡಿಯಲ್ಲಿನೀಡಲಾಗುವುದು.
13. ಸರ್ಕಾರಿ ಕೈಗಾರಿಕಾ ಉದ್ದೇಶಗಳಿಗೆ ಜಮೀನು ನೀಡಿದ ರೈತರ ಮಕ್ಕಳಿಗೆ ಶೇಕಡ 5% ರಷ್ಟು ಸ್ಥಾನಗಳನ್ನು ಸಮತಳ ಮೀಸಲಿಡಲಾಗಿದೆ.
14. ರಾಜ್ಯದ ಪ್ರತಿಯೊಂದು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ, ಕಾಶ್ಮೀರದಿಂದ ವಲಸೆ ಬಂದಂತಹ ಒಬ್ಬ ಅಭ್ಯರ್ಥಿಗೆ, ಯಾವುದಾದರೂ ಒಂದು ವೃತ್ತಿಯಲ್ಲಿ ಅಭ್ಯರ್ಥಿಯ ಇಚ್ಛೆಯಂತೆ ಒಂದು ಸ್ಥಾನವನ್ನು ನೀಡಲಾಗುವುದು.
15. ಅಭ್ಯರ್ಥಿಗಳು ಕೈ.ತ.ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ದಿನಾಂಕ:-20-05-2024 ರಿಂದ ದಿನಾಂಕ:03-06-2024 ವರೆಗೆ ಆನ್ ಲೈನ್ ವೆಬ್ ಸೈಟ್ www.cite.karnataka.gov.inಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.
16. Aadhar Number/Ration Card Number/e-Mail/Mobile Number ವಿವರಗಳನ್ನು ಕಡ್ಡಾಯವಾಗಿ ನಮೂದಿಸಿ, ದಾಖಲಾತಿ ಸಮಯದಲ್ಲಿ ಪ್ರತಿ ಸಲ್ಲಿಸತಕ್ಕದ್ದು ಹಾಗೂ ಪ್ರವೇಶಾತಿ ಸಮಯದಲ್ಲಿ ಸಲ್ಲಿಸಿದ e-Mail/Mobile Number ಗಳನ್ನು ತರಬೇತಿ ಮುಗಿಸಿ ಪರೀಕ್ಷೆಗೆ ಹಾಜರಾಗುವವರೆಗೂ ಅವಕಾಶವಿರುದಿಲ್ಲ.
17. ಆನ್ ಲೈನ್ ಮೂಲಕ ಅರ್ಜಿ ಭರ್ತಿ ಮಾಡಲು ದಿನಾಂಕ: 03-06-2024 ಕೊನೆಯದಿನಾಂಕವಾಗಿರುತ್ತದೆ. ಅಭ್ಯರ್ಥಿಗಳು ರಾಜ್ಯದ ಯಾವುದಾದರು ಸರ್ಕಾರಿ & ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ವೃತ್ತಿಗಳ ಅಯ್ಕೆಗಳನ್ನು ಅವರ ಇಚ್ಛಾನುಸಾರ ಆಧ್ಯತಾ ಪಟ್ಟಿಯಲ್ಲಿ ನಮೂದಿಸುವುದು. (ಕನಿಷ್ಠ01 ರಿಂದ ಗರಿಷ್ಠ 20 ಆಯ್ಕೆಗಳಿಗೆ ಅವಕಾಶವಿದೆ.)
18. ರಾಜ್ಯದಲ್ಲಿನ ಯಾವುದೇ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅಭ್ಯರ್ಥಿಗಳು ನೀಡಿದ ಆದ್ಯತೆಯ ಮೇರೆಗೆ ಅರ್ಹತೆ ಮತ್ತು ಮೀಸಲಾತಿಯನ್ವಯ ಪ್ರವೇಶ ನೀಡಲಾಗುವುದು.
19. ದಾಖಲಾತಿ ಪರಿಶೀಲನೆಗೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಆಯ್ಕೆ ಮಾಡಿಕೊಂಡ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮಾತ್ರ ನಿಗದಿತ ದಿನಾಂಕಗಳಂದು ಹಾಜರಾಗಿ, ದಾಖಲಾತಿ ಪರಿಶೀಲನಾ ಶುಲ್ಕ ರೂ.50/-

ಪಾವತಿಸಿ ಮೂಲ ದಾಖಲಾತಿಗಳನ್ನು ಮತ್ತು **Attested Xerox** ಪ್ರತಿಗಳನ್ನು ಹಾಜರುಪಡಿಸಿ, ಪರಿಶೀಲನೆಯ ನಂತರ ಪ್ರವೇಶ ಬಯಸುವ ಯಾವುದಾದರೂ ವೃತ್ತಿಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸುವುದು.

20. ಹೊರನಾಡು/ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಸರ್ಕಾರದ ಅದೇಶ ಸಂ.ಕಸಂವಾಪ್ರ 73 ಕೆಒಎಲ್ 2011 (ಭಾಗ-1), ಬೆಂಗಳೂರು, ದಿ.13/07/2011 ರಂತೆ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ಮೀಸಲಾತಿ ಸೌಲಭ್ಯ ಪಡೆಯಲು, ಅಭ್ಯರ್ಥಿಯ ಮತ್ತು ಪೋಷಕರ ಮಾತೃಭಾಷೆ ಕನ್ನಡಭಾಷೆಯಾಗಿದ್ದು, ಅಭ್ಯರ್ಥಿಯ ತಂದೆ, ತಾಯಿ ಅಥವಾ ಪೋಷಕರು ಮೂಲತಃ ಕರ್ನಾಟಕ ನಿವಾಸಿಯಾಗಿದ್ದು, ಅಂತಹ ಪೋಷಕರ ಮಕ್ಕಳು ದೇಶದ ಯಾವುದೇ ಭಾಗದಲ್ಲಿ ಅನುಬಂಧ -1 ರ ಪಟ್ಟಿಯಲ್ಲಿನ ಅಧಿಕೃತ ಶಾಲೆ/ಬೋರ್ಡ್ ಅಥವಾ ಸಂಸ್ಥೆಗಳಲ್ಲಿ ನಿಯತ ವ್ಯಾಸಂಗ ಮಾಡಿ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. (ಅಭ್ಯರ್ಥಿಯು ಕಂದಾಯ ಇಲಾಖೆ ನೀಡುವ ಜಾತಿ/ಅದಾಯ/ವಾಸಸ್ಥಳ ದೃಢೀಕರಣ ಪತ್ರವನ್ನು/Aadhar/Domicile Certificate ಸಲ್ಲಿಸತಕ್ಕದ್ದು.)

21. ಎಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಪಡೆದುಕೊಳ್ಳುವ ತರಬೇತಿದಾರರು ನಿಯಮಾನುಸಾರ ಕನಿಷ್ಠ ಹಾಜರಾತಿಯನ್ನು ಪಡೆಯುವುದು ಕಡ್ಡಾಯವಾಗಿದ್ದು, ನಿಗಧಿತ ಹಾಜರಾತಿಯನ್ನು ಪಡೆದಂತಹ ತರಬೇತಿದಾರರು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರಿ /ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರನ್ನು / ಇಲಾಖೆಯ ಜಾಲ ತಾಣವನ್ನು ಸಂಪರ್ಕಿಸಿ ವಿವರಗಳನ್ನು ಪಡೆಯಬಹುದಾಗಿದೆ.

ಆಯುಕ್ತರು

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ

ಗೆ,

ಪ್ರಾಚಾರ್ಯರು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ/ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಪ್ರವೇಶಕ್ಕೆ ಸಂಬಂಧಿಸಿದಂತೆ ಸರ್ಕಾರವು ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ, ಗ್ರಾಮೀಣ ಕೃಪಾಂಕ ಇತ್ಯಾದಿ ಮಾಹಿತಿ ವಿವರಗಳನ್ನು ಆಯಾ ಸಂಸ್ಥೆಯಲ್ಲಿ ಜಾರಿಯಲ್ಲಿರುವ ವೃತ್ತಿಗಳ ವಿವರಗಳೊಂದಿಗೆ ಪ್ರಕಟಣಾ ಫಲಕ ಮತ್ತು ಸಂಸ್ಥೆಯ ಪ್ರಮುಖ ಸ್ಥಳಗಳಲ್ಲಿ ಕಾಣುವಂತೆ ಪ್ರಕಟಿಸಬೇಕು. **NCVT** ಯಿಂದ ಸಂಯೋಜನೆ ಹೊಂದಿರುವ ವೃತ್ತಿ, ಘಟಕಗಳ ವಿವರಗಳನ್ನು ಪ್ರತ್ಯೇಕವಾಗಿ ಪ್ರಕಟಿಸಬೇಕು. ಪ್ರವೇಶ ಮಾಡಿಸಿಕೊಳ್ಳಲಾಗುತ್ತಿರುವ ವೃತ್ತಿ ಮತ್ತು ಘಟಕಗಳ ಪ್ರವೇಶದ ಮಾರ್ಗ ಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲಾ ಮುನ್ನೆಚ್ಚರಿಕೆಯ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು. ಈ ಮಾಹಿತಿಗಳನ್ನು ಹಾಗೂ ಹೊಸ ವೃತ್ತಿಗಳನ್ನು ಸಾರ್ವಜನಿಕರಿಗೆ/ಪೋಷಕರಿಗೆ ಸ್ಪಷ್ಟವಾಗಿ ತಿಳಿಯುವಂತೆ ದೊಡ್ಡ ಅಕ್ಷರಗಳಲ್ಲಿ ಪ್ರವೇಶ ಸಮಯದಲ್ಲಿ ಪ್ರಕಟಣಾ ಫಲಕವನ್ನು ಅನೇಕ ಕಡೆಗಳಲ್ಲಿ ಎಲ್ಲರಿಗೂ ಕಾಣುವಂತೆ ಪ್ರಕಟಿಸಬೇಕು. ಸಂಭಂದಿಸಿದ ಎಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಗಳು ಪ್ರವೇಶ ಮಾಡಿಕೊಳ್ಳುವ ಮುಂಚಿತವಾಗಿ MIS Potal ನಲ್ಲಿ Shift & Unit (Current Session) Vacant ಇರುವ ಬಗ್ಗೆ ಖಾತರಿಪಡಿಸಿಕೊಂಡು ಅಂತಹ ವೃತ್ತಿ/ಘಟಕಗಳಿಗೆ ಮಾತ್ರ ಪ್ರವೇಶ ಮಾಡಿಸಿಕೊಳ್ಳುವುದು ಹಾಗೂ ಇದನ್ನು

ಉಲ್ಲಂಘಿಸುವ ಸಂಸ್ಥೆಗಳ ಪ್ರಾಚಾರ್ಯರು ಇಂತಹ ಪ್ರವೇಶಗಳಿಗೆ ನೇರವಾಗಿ ಜವಾಬ್ದಾರರಾಗಿರುತ್ತಾರೆ. ನಿಗಧಿತ ಕೊನೆಯ ದಿನಾಂಕದ ಮೊದಲು ಪ್ರವೇಶ ಪೂರ್ಣಗೊಳಿಸಿ, ಪ್ರವೇಶ ನೀಡಿರುವ ಎಲ್ಲಾ ತರಬೇತಿದಾರರ ಪಟ್ಟಿಯನ್ನು www.cite.karnataka.gov.in Portal ನಿಂದ Download ಮಾಡಿ, ಪ್ರತಿ ಪುಟದಲ್ಲಿ ಪ್ರಾಚಾರ್ಯರ ಸಹಿ, ದಿನಾಂಕದೊಂದಿಗೆ ವಿಭಾಗೀಯ ಕಛೇರಿಯ ಜಂಟೀ ನಿರ್ದೇಶಕರಿಗೆ ಪ್ರವೇಶ ಮುಗಿದ ಮಾರನೇ ದಿನ ನೋಂದಾಯಿತ ಅಂಚೆಯಲ್ಲಿ ಸಲ್ಲಿಸುವುದು.

ಪ್ರತಿಗಳು:

1. ಜಂಟೀ ನಿರ್ದೇಶಕರು (ತ) ವಿಭಾಗೀಯ ಕಛೇರಿ, ಇವರ ಮಾಹಿತಿಗಾಗಿ ಮತ್ತು ಸದರಿ ಅಧಿಸೂಚನೆ & ವೇಳಾಪಟ್ಟಿಯ ಪ್ರತಿಗಳನ್ನು ತಪ್ಪದೇ ಅದೇ ದಿನ ನಿಮ್ಮವಿಭಾಗಿಯ ಕಛೇರಿ ವ್ಯಾಪ್ತಿಯ ಎಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಕಡ್ಡಾಯವಾಗಿ ಕಳುಹಿಸಿ, MIS Portal ನಲ್ಲಿ ಖಾಲಿ ಇರುವ Shift & Unit (Current Session) Vacant ವೃತ್ತಿ/ಘಟಕಗಳಿಗೆ ಮಾತ್ರ Seat Availability ಮಾಹಿತಿಯನ್ನು ನಿಖರವಾಗಿ ಒದಗಿಸಲು ಅಗತ್ಯ ಕ್ರಮಕೈಗೊಳ್ಳಲು ಹಾಗೂ ಆಗಸ್ಟ್-2024ನೇ ಸಾಲಿನ ಪ್ರವೇಶಗಳು ಮುಗಿದ ತಕ್ಷಣ ಉಳಿಕೆ ಸ್ಥಾನಗಳ ಬಗ್ಗೆ ವರದಿ ನೀಡುವುದು. ತಮ್ಮ ವ್ಯಾಪ್ತಿಯ ಎಲ್ಲಾ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು (NCVT ಯಿಂದ ಸಂಯೋಜನೆ ಹೊಂದಿರುವ) ನಿಗಧಿತ ಅವಧಿಯಲ್ಲಿ ಪ್ರವೇಶ ಪ್ರಕ್ರಿಯೆಯನ್ನು ಉಲ್ಲೇಖ (2) ರ ಆದೇಶದ ಷರತ್ತುಗಳಿಗನುಸಾರ ಮಾಡಿಕೊಂಡು Online Admission Portal ಗೆ (www.cite.karnataka.gov.in) ಅವರುಗಳಿಗೆ ನೀಡಿರುವ User Credential ಮುಖಾಂತರ ಅಭ್ಯರ್ಥಿಗಳ ವಿವರಗಳನ್ನು Upload ಮಾಡಿರುವ ಬಗ್ಗೆ ಖಾತರಿ ಪಡಿಸಿಕೊಂಡು ಈ ಕಛೇರಿಗೆ ವರದಿ ಸಲ್ಲಿಸುವುದು. ಅರ್ಹತೆ ಇಲ್ಲದ ಯಾವುದೇ ಖಾಸಗಿ ಸಂಸ್ಥೆಯು ತರಬೇತಿದಾರರ ಪ್ರವೇಶ ಮಾಡಿಕೊಂಡಿಲ್ಲ ಎಂಬುದನ್ನು ಖಾತರಿ ಪಡಿಸುವುದು. 2024 ನೇ ಸಾಲಿನ ಪ್ರವೇಶ ಕಾರ್ಯಗಳಿಗೆ ಸಂಬಂಧಿಸಿದ ತಾತ್ಕಾಲಿಕ ವೇಳಾಪಟ್ಟಿಯನ್ವಯ ದಿನಾಂಕ :01-06-2024 ರಂದು ಅಂತಿಮ Seat Matrix ವಿವರಗಳನ್ನು ಸಾರ್ವಜನಿಕರಿಗೆ Portal ನಲ್ಲಿ ಪ್ರಕಟಿಸಬೇಕಾಗಿದ್ದು, 04 ವಿಭಾಗೀಯ ಕಛೇರಿಗಳ ಜಂಟೀ ನಿರ್ದೇಶಕರುಗಳು ತಮ್ಮ ವಿಭಾಗೀಯ ವ್ಯಾಪ್ತಿಗೊಳಪಡುವ ಎಲ್ಲಾ ಸಂಸ್ಥೆಗಳ ವಿವರಗಳನ್ನು ದಿನಾಂಕ:24-05-2024 ರೊಳಗೆ Online ನಲ್ಲಿ ಆಯುಕ್ತಾಲಯಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಸೂಕ್ತ ಕ್ರಮ ಕೈಗೊಳ್ಳುವುದು.

2. ಜಂಟೀ ನಿರ್ದೇಶಕರು (ತ) , STARC, ಮಳವಳ್ಳಿ ಮತ್ತು ಐ.ಟಿ.ಓ.ಟಿ, ದಾವಣಗೆರೆ ಇವರಿಗೆ ಮಾಹಿತಿಗಾಗಿ.

3. ಉಪ ನಿರ್ದೇಶಕರು (ತ), ಸಂಯೋಜನೆ ವಿಭಾಗ ನಿರ್ದೇಶನಾಲಯರವರ ಮಾಹಿತಿಗಾಗಿ ಹಾಗೂ ಸಕ್ರಿಯ (Active)/Shifting ಸಂಸ್ಥೆಗಳ (With MIS Code) ಸಹಿತ ವಿವರಗಳನ್ನು ಒದಗಿಸಲು ಮತ್ತು ನಿಯಮಗಳನ್ನು ಉಲ್ಲಂಘಿಸುವಂತಹ ಖಾಸಗಿ ಅನುದಾನಿತ / ಅನುದಾನ ರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರ ವಿರುದ್ಧ ಸೂಕ್ತ ಶಿಸ್ತು ಕ್ರಮಕೈಗೊಳ್ಳಲು ಸೂಚಿಸಲಾಗಿದೆ.